ಕಾಲಂ 3 ಮತ್ತು 9ರಲ್ಲಿ ವಿಸ್ತೀರ್ಣ ಹೊಂದಾಣಿಕೆ ಇಲ್ಲದ ಸರ್ವೆ ನಂಬರಿನ ವಿವರ

ತಾಲ್ಲೂಕು: ಬೆಂಗಳೂರು ದಕ್ಷಿಣ ತಾಲ್ಲೂಕು

ಉತ್ತರಹಳ್ಳಿ–1 **ಗ್ರಾಮ: ಪಿಲ್ಲಗಾನಹಳ್ಳಿ**

ಕ್ರ ಸಂ.	ಸರ್ವೆ ನಂಬರ್ ಮತ್ತು ಹಿಸ್ಸಾ	ಬಾಕಿ ವಿಸ್ತೀರ್ಣ	ಸ್ವಾಧೀನದಾರರು ವಿಸ್ತೀರ್ಣ	ಜಮೀನಿನ ತರಹೆ
1	**2**	**3**	**4**	**5**
1	16/1	3–06	0–11	ಹಿಡುವಳಿ
2	7/1ಎ	3–03	0–15	ಹಿಡುವಳಿ
3	7/1ಬಿ	0–14	0–15	ಹಿಡುವಳಿ
4	1	199–07	206–25	ಸರ್ಕಾರಿ

ತಹಶೀಲ್ದಾರ್
ಬೆಂಗಳೂರು ದಕ್ಷಿಣ ತಾಲ್ಲೂಕು
ಬೆಂಗಳೂರು

ಗೋಮಾಳದಲ್ಲಿ ಭೂ ಮಂಜೂರಾತಿ

325 (733) ಶ್ರೀ ಕುಮಾರಸ್ವಾಮಿ ಕೆ.ಜಿ ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ದಕ್ಷಿಣ ತಾಲ್ಲೂಕು, ಬಿ.ಎಂ. ಕಾವಲು ಗ್ರಾಮದ ಸರ್ವೆ ನಂಬರ್ 137ರ ಸರ್ಕಾರಿ ಗೋಮಾಳದಲ್ಲಿ ಭೂ ಮಂಜೂರಾತಿ ಮಾಡಿದ ಜಮೀನಿನ ವಿಸ್ತೀರ್ಣವೆಷ್ಟು (ಸಾಗುವಳಿ ಚೀಟಿದಾರರ ಹೆಸರು, ವಿಸ್ತೀರ್ಣ, ಜಾತಿ ವಿವರ ಒದಗಿಸುವುದು);

ಆ) ಈ ಪೈಕಿ ಭೂ ಮಂಜೂರಾತಿ ನಿಯಮಗಳ ಷರತ್ತು ಉಲ್ಲಂಘಿಸಿ 15 ವರ್ಷ ಅವಧಿಯೊಳಗೆ ಪರಭಾರೆ ಮಾಡಿದ ಪ್ರಕರಣಗಳೆಷ್ಟು; ಈ ಉಲ್ಲಂಘನೆಗಾಗಿ ಸರ್ಕಾರಕ್ಕೆ ಎಷ್ಟು ಜಮೀನನ್ನು ವಾಪಸ್ಸು ಪಡೆಯಲಾಗಿದೆ;

ಇ) ಷರತ್ತು ಉಲ್ಲಂಘಿಸಿದ್ದರೂ ಖಾತೆ ಬದಲಾವಣೆ ಮಾಡಿದ ಪ್ರಕರಣಗಳೆಷ್ಟು; ಈ ಬಗ್ಗೆ ಯಾವ ರೀತಿ ಇಲಾಖಾ ಕ್ರಮ / ಆಡಳಿತ ಕ್ರಮ ಜರುಗಿಸಲಾಗಿದೆ; (ವಿವರ ನೀಡುವುದು)?

ಶ್ರೀ ಜಿ. ಕರುಣಾಕರ ರೆಡ್ಡಿ (ಕಂದಾಯ ಸಚಿವರು):

ಅ) ಬೆಂಗಳೂರು ದಕ್ಷಿಣ ತಾಲ್ಲೂಕು, ಬಿ.ಎಂ. ಕಾವಲ್ ಗ್ರಾಮದ ಸ.ನಂ. 137ರಲ್ಲಿ ಗ್ರೋ ಮೋರ್ ಫುಡ್ ಯೋಜನೆ ಅಡಿ ಈ ಕೆಳಕಂಡವರಿಗೆ 5 ವರ್ಷಗಳ ಅವಧಿಗೆ ಒಟ್ಟು 108 ಎಕರೆ ಜಮೀನನ್ನು ಹಂಗಾಮಿಯಾಗಿ ನೀಡಲಾಗಿರುತ್ತದೆ.

ಕ್ರ.ಸ.	ಹೆಸರು	ವಿಸ್ತೀರ್ಣ (ಎ/ಗು)	ಜಾತಿ
1	ವೆಂಕಟಭೋವಿ ಬಿನ್ ಕಬಾಳಭೋವಿ	6.00	ಭೋವಿ
2	ವೆಂಕಟಾಭೋವಿ	6.00	ಭೋವಿ
3	ಮುನಿಸ್ವಾಮಿಭೋವಿ	6.00	ಭೋವಿ
4	ಈರಾಭೋವಿ	6.00	ಭೋವಿ
5	ಯಂಗಲಭೋವಿ	6.00	ಭೋವಿ
6	ಗುರವಾಭೋವಿ	6.00	ಭೋವಿ
7	ಚಿನ್ನಲಿಗಾಭೋ ವಿ	6.00	ಭೋವಿ
8	ಚನ್ನಲಿಗಾಭೋವಿ	6.00	ಭೋವಿ
9	ಗುರುಸ್ವಾಮಿಭೋವಿ	6.00	ಭೋವಿ
10	ಮುನಿಸ್ವಾಮಿ	6.00	ಭೋವಿ
11	ಕುಳ್ಳಾಭೋವಿ	6.00	ಭೋವಿ
12	ರಂಗಯ್ಯ	6.00	ಭೋವಿ
13	ಲಕ್ಷ್ಮಭೋವಿ	6.00	ಭೋವಿ
14	ವೆಂಕಟಯಲ್ಲಭೋವಿ	6.00	ಭೋವಿ
15	ತಿಮ್ಮಭೋವಿ	6.00	ಭೋವಿ
16	ಅವಲಾಭೋವಿ	6.00	ಭೋವಿ
17	ಯಂಗಲಾ ಬಿನ್ ಈರಚಿನ್ನಕಯ್ಯ	6.00	ಭೋವಿ
18	ಚಿನ್ನಕರಿಯ	6.00	ಭೋವಿ
	ಒಟ್ಟು	**108.00**	

ಆದರೆ ಮೆಲ್ಕಂಡವರಿಗೆ ಜಮೀನನ್ನು ಖಾಯಂಗೊಳಿಸಿರುವುದಕ್ಕೆ ಯಾವುದೇ ಆದೇಶ ಇರುವುದಿಲ್ಲ.

ಆ) ಮೇಲ್ಕಂಡ 18 ಮಂದಿಗೆ 1941–42ರಲ್ಲಿ ಹಂಗಾಮಿಯಾಗಿ ಮಂಜೂರಾಗಿದ್ದು, 1967–68ರಲ್ಲಿ ಮಾರಾಟ ಮಾಡಿರುತ್ತಾರೆ. ಖಾಯಂ ಮಂಜೂರಾತಿ ಇಲ್ಲದೇ ಹಂಗಾಮಿ ಮಂಜೂರಾತಿ ಮೇರೆಗೆ ಮಾರಾಟ ಮಾಡಿದ ಕಾರಣ ವಿಶೇಷ ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ಪ್ರಕರಣ ನಡೆದು ಸರ್ಕಾರದ ವಶಕ್ಕೆ ಪಡೆಯಲು ವಿಶೇಷ ಜಿಲ್ಲಾಧಿಕಾರಿಗಳು ಆದೇಶಿಸಿರುತ್ತಾರೆ. ವಿಶೇಷ ಜಿಲ್ಲಾಧಿಕಾರಿಗಳ ಆದೇಶದ ವಿರುದ್ಧ ಅರ್ಜಿದಾರರು ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಹಾಗೂ ರಿಟ್ ಅಪೀಲು ಸಲ್ಲಿಸಿದ್ದು, ನ್ಯಾಯಾಲಯದ ಆದೇಶದಂತೆ ಮರು ವಿಚಾರಣೆ ಬಾಕಿ ಇರುವುದರಿಂದ ಸದರಿ ಜಮೀನನ್ನು ಸರ್ಕಾರದ ವಶಕ್ಕೆ ತೆಗೆದುಕೊಂಡಿರುವುದಿಲ್ಲ.

ಇ) ಈ ಪ್ರಕರಣಗಳಿಗೆ ಸಂಬಂಧಿಸಿದಂತೆ ಮಾನ್ಯ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ: 22819/2005 ಮತ್ತು ರಿಟ್ ಅಪೀಲ್ ಸಂಖ್ಯೆ: 12 ಮತ್ತು 33/08–09ಕ್ಕೆ ಸಂಬಂಧಿಸಿದಂತೆ ನೀಡಿರುವ ಆದೇಶದನ್ವಯ ವಿಶೇಷ ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ವಿಚಾರಣೆ ಬಾಕಿ ಇರುವುದಿರಂದ ಯಾವುದೇ ಕ್ರಮ ಜರುಗಿಸಿರುವುದಿಲ್ಲ.

ಈ) ವಿಶೇಷ ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ಪ್ರಕರಣವು ಇತ್ಯರ್ಥವಾದ ನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಹೇಮಾವತಿ ಜಲಾಶಯ

328 (665) ಶ್ರೀ ಕುಮಾರಸ್ವಾಮಿ ಹೆಚ್.ಕೆ. (ಸಕಲೇಶಪುರ) : ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಾಸನ ಜಿಲ್ಲೆಯ ಹಾಸನ, ಸಕಲೇಶಪುರ ಮತ್ತು ಆಲೂರು ತಾಲ್ಲೂಕಿನ 17 ಹಳ್ಳಿಗಳು ಹೇಮಾವತಿ ಜಲಾಶಯದ ಹಿನ್ನೀರಿನ ಶೀತಪೀಡಿತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈ ಹಳ್ಳಿಗಳನ್ನು ಸ್ಥಳಾಂತರಿಸಲು ಮತ್ತು ಪುನರ್ವಸತಿ ಕಲ್ಪಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಬಸವರಾಜ ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು):

ಅ) ಹೌದು, ಹಾಸನ ಜಿಲ್ಲೆ, ಹಾಸನ, ಸಕಲೇಶಪುರ ಮತ್ತು ಆಲೂರು ತಾಲ್ಲೂಕಿನ 17 ಗ್ರಾಮಗಳು ಹೇಮಾವತಿ ಜಲಾಶಯ ಹಿನ್ನೀರಿನಿಂದ ಶೀತಪೀಡಿತವಾಗಿದೆ ಎಂದು ಗ್ರಾಮಸ್ಥರು ಹಾಗೂ ಜನಪ್ರತಿನಿಧಿಗಳು